ಶ್ರೀ ಕೆ. ವಿರೂಪಾಕ್ಷಪ್ಪ : ನಮ್ಮಲ್ಲಿ ಇಂಥ ಅವ್ಯವಹಾರಗಳೇ ಹೆಚ್ಚು ನಡೆಯುತ್ತಿವೆ. ಹಾಗಾಗಿ ಅದನ್ನೇ ಕೇಳಬೇಕಾಗಿ ಬಂತು. ನಾವೇನು ಮಾಡೋಣ ಅಧ್ಯಕ್ಷರೆ? ರೂಲಿಂಗ್ ಪಾರ್ಟಿಯವರು ಮಾಡುವ ಅವ್ಯವಹಾರವನ್ನು ಕೇಳಬೇಕಲ್ಲ?

ಶ್ರೀ ಹೆಚ್. ನಾಗಪ್ಪ : ಆ ವಿಚಾರದ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಜರ್ಮನಿಯ ಕೆ.ಎಫ್.ಡಬ್ಲ್ಯೂ. ಯೋಜನೆಗಳು.

296 - ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಪ್ರದೇಶದಲ್ಲಿ ಜರ್ಮನಿಯ ಕೆ.ಎಫ್.ಡಬ್ಲ್ಯೂ. ಯೋಜನೆಗಳು ಮಂಜೂರಾತಿಯಾಗಿವೆ. ಯಾವ ವರ್ಷದಲ್ಲಿ ಮಂಜೂರಾತಿಯಾಗಿರುತ್ತದೆ. ಯಾವ ವರ್ಷ ಹಣ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾಗಿರುವ ಹಣದಲ್ಲಿ ಖರ್ಚಾಗದೆ ಬಾಕಿ ಉಳಿದಿರುವ ಹಣವೆಷ್ಟು?

ಆ) 1997-98ನೇ ಸಾಲಿಗೆ ಮಂಜೂರಾಗಿರುವ ಹಣವೆಷ್ಟು : ಬಿಡುಗಡೆಯಾಗಿರುವ ಹಣವೆಷ್ಟು? (ಪ್ರದೇಶವಾರು ಮತ್ತು ಯೋಜನಾವಾರು ಹಣ, ಪ್ರಗತಿ ಮತ್ತು ಪ್ರದೇಶದ ಮಾಹಿತಿ ಒದಗಿಸುವುದು)

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಜರ್ಮನಿ ಅಭಿವೃದ್ಧಿ ಬ್ಯಾಂಕ್ (ಕೆ.ಎಫ್.ಡಬ್ಲ್ಯೂ) ನೆರವಿನ ಜಲಾನಯನ ಯೋಜನೆಗಳಿಗೆ ಈ ಕೆಳಕಂಡ ಐದು ಪ್ರದೇಶದಲ್ಲಿ ಮಾರ್ಚಿ 1996 ರಲ್ಲಿ ಮಂಜೂರಾತಿ ನೀಡಲಾಗಿದೆ.

1)	ಹೊಸೂರಳ್ಳ	..	ಕೋಲಾರ ಜಿಲ್ಲೆ (ಗೌರೀಬಿದನೂರ ತಾ)
2)	ಮೇಳ್ಯ	..	ಕೋಲಾರ ಜಿಲ್ಲೆ (ಗೌರೀಬಿದನೂರು ತಾ)
3)	ಕೋಲಾರಮ್ಮ	..	ಕೋಲಾರ ಜಿಲ್ಲೆ (ಕೋಲಾರ ತಾಲ್ಲೂಕು)
4)	ಅರಸೀಕೆರೆ	..	ಹಾಸನ ಜಿಲ್ಲೆ (ಅರಸೀಕೆರೆ ತಾಲ್ಲೂಕು)
5)	ಮೋತಿ ತಲಾಬ್	..	ಮಂಡ್ಯ ಜಿಲ್ಲೆ (ಪಾಂಡವಪುರ ತಾಲ್ಲೂಕು)

1996ರ ಮಾರ್ಚಿನಲ್ಲಿ ಮಂಜೂರಾದ ಈ ಜಲಾನಯನ ಯೋಜನೆಗಳಿಗೆ 1996ರ ಆಗಸ್ಟ್ ಅಂತ್ಯದಲ್ಲಿ ಅನುದಾನ ಬಿಡುಗಡೆ ಮಾಡಲಾಗಿದೆ. 1996-97ನೇ ಸಾಲಿನಲ್ಲಿ ಈ ಯೋಜನೆಗೆ ಒಟ್ಟು 400.00 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದ್ದು - ಈ ಪೈಕಿ 282.578 ಲಕ್ಷ ರೂ. ಗಳನ್ನು ವೆಚ್ಚ ಮಾಡಲಾಗಿದೆ. ಬಾಕಿ ಉಳಿದಿರುವ ಹಣ 117.422 ಲಕ್ಷ ರೂ.ಗಳು.

ಆ) ಈ ಕಾರ್ಯಕ್ರಮದಲ್ಲಿ 1997-98ನೇ ಸಾಲಿನಲ್ಲಿ ಯೋಜನಾವಾರು ಬಿಡುಗಡೆ ಮಾಡಲಾಗಿರುವ ಅನುದಾನದ ವಿವರಗಳನ್ನು ಕೆಳಗೆ ನೀಡಲಾಗಿದೆ.

(ಲಕ್ಷ ರೂ.ಗಳಲ್ಲಿ)

ಜಲಾನಯನ ಯೋಜನೆ ಹೆಸರು.	1997-98ನೇ ಸಾಲಿಗಾಗಿ ಮೀಸಲಾಗಿರುವ ಅನುದಾನ	ಬಿಡುಗಡೆ ಮಾಡಲಾಗಿರುವ ಅನುದಾನ	ವೆಚ್ಚ
ಅ) ಹೊಸೂರಳ್ಳ	92.323	28.089	ದಿ.8-7-97
ಆ) ಮೇಳ್ಯ	77.815	21.023	ರಂದು ಅನುದಾನ-
ಇ) ಕೋಲಾರಮ್ಮ	76.582	25.389	ವನ್ನು ಬಿಡುಗಡೆ
ಈ) ಅರಸೀಕೆರೆ	89.742	29.337	ಮಾಡಲಾಗಿರುತ್ತದೆ
ಉ) ಲೋಕೀತ ಲಾಬ್	63.538	29.085	
ಒಟ್ಟು	**400.00**	**132.932**	

ಯೋಜನೆಯ ಅನುಷ್ಠಾನವು ಜುಲೈನಲ್ಲಿ ಪ್ರಾರಂಭವಾಗಿರುವುದರಿಂದ ವೆಚ್ಚದ ವಿವರಗಳು ಆಗಸ್ಟ್ 97ರ ಮಧ್ಯ ಭಾಗದಲ್ಲಿ ದೊರೆಯಲಿದೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ಜರ್ಮನಿ ಅಭಿವೃದ್ಧಿ ಬ್ಯಾಂಕ್‌ನ ನೆರವಿನಿಂದ ಈಗಾಗಲೇ ಐದು ಪ್ರದೇಶಗಳನ್ನು ಈ ರಾಜ್ಯದಲ್ಲಿ ತೆಗೆದುಕೊಂಡಿದ್ದಾರೆ. ವಿಶೇಷವಾಗಿ ಮೂರು ಯೋಜನೆಗಳು ಕೋಲಾರ ಜಿಲ್ಲೆಯಲ್ಲಿಯೇ ಇವೆ. ಆದರೆ ಒಟ್ಟು ಹಣ 400 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿ 117.422 ಲಕ್ಷ ರೂಪಾಯಿಗಳು ಹೋದ ವರ್ಷದ ಸಾಲಿನಲ್ಲಿ ಖರ್ಚಾಗಲಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಹಾಗಾದರೆ ಉಳಿದಿರತಕ್ಕಂಥ ಹಣವು ಲ್ಯಾಪ್ಸ್ ಆಗಿದೆಯೋ ಅಥವಾ ಈ ವರ್ಷದಲ್ಲಿ ಉಪಯೋಗಿಸಲು ಅವಕಾಶ ಉಳಿದಿದೆಯೋ ಎಂಬುದು ಒಂದನೇ ಪ್ರಶ್ನೆ. ಎರಡನೆಯದಾಗಿ ಈ ಹಣವನ್ನು ಖರ್ಚು ಮಾಡದೇ ಇರತಕ್ಕಂಥಾದ್ದಕ್ಕೆ ಕಾರಣ, ಸಕಾಲದಲ್ಲಿ ಹಣವನ್ನು ಬಿಡುಗಡೆ ಮಾಡಲಿಕ್ಕೆ ಆಗಲಿಲ್ಲವೆ? ಅಥವಾ ಸಿಬ್ಬಂದಿ ಕೊರತೆ ಏನಾದರೂ ಇದೆಯೇ ಅಥವಾ ನಿಮ್ಮ ಸಿಬ್ಬಂದಿಗೆ ಸಾಮರ್ಥ್ಯ ಇಲ್ಲವೆ?

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈ ಹಣವು ಲ್ಯಾಪ್ಸ್ ಆಗುವುದಿಲ್ಲ. ಒಟ್ಟು ಯೋಜನೆಗೆ ಇಷ್ಟು ಹಣವನ್ನು ಖರ್ಚು ಮಾಡಬೇಕೆಂದು ಇರುತ್ತದೆ. ಅದನ್ನು ಯೋಜನಾ ಅವಧಿಯಲ್ಲಿ ಖರ್ಚು ಮಾಡುತ್ತೇವೆ. ಹಾಗಾಗಿ ಹಣ ಲ್ಯಾಪ್ಸ್ ಆಗುವುದಿಲ್ಲ. ಕಳೆದ ವರ್ಷ ಈ ಯೋಜನೆಯ ಪ್ರಾರಂಭದ ವರ್ಷವಾದುದರಿಂದ ಸ್ವಾಭಾವಿಕವಾಗಿಯೇ ಕೆಲವು ಎಡರುತೊಡರುಗಳು ಪ್ರಾರಂಭದಲ್ಲಿ ಇರುತ್ತವೆ. ಹಾಗಾಗಿ 100 ಲಕ್ಷ ಚಿಲ್ಲರೆ ಹಣ ಖರ್ಚಾಗಲಿಲ್ಲ. ಹೋದ ವರ್ಷದ ಹಣ, ಈ ವರ್ಷದ ಹಣ ಅಥವಾ ಮುಂದೆ ಇರತಕ್ಕಂಥ ಹಣವನ್ನು ಈ ಯೋಜನಾ ಅವಧಿಯಲ್ಲಿಯೇ ಖರ್ಚು ಮಾಡುತ್ತೇವೆ. ಸಿಬ್ಬಂದಿ ಕೊರತೆ ಇದ್ದರೂ ಕೂಡ ಈ ಯೋಜನೆಗಳನ್ನು ಕಾರ್ಯಗತ ಮಾಡತಕ್ಕಂಥಾದ್ದರಲ್ಲಿ ಸಿಬ್ಬಂದಿ ಕೊರತೆ ಇಲ್ಲದ ಹಾಗೆ ನಾವು ನೋಡಿಕೊಳ್ಳುತ್ತೇವೆ.

ಶ್ರೀ ಬಿ. ಶಿವರಾಮು : ಅಂದರೆ ಸಕಾಲದಲ್ಲಿ ಹಣ ಬಿಡುಗಡೆಯಾಗದ ಕಾರಣ ಹಣ ಖರ್ಚಾಗಲಿಲ್ಲ.

ಶ್ರೀ ಸಿ. ಬೈರೇಗೌಡ : ಇದು, ಪ್ರಾರಂಭದ ವರ್ಷದಲ್ಲಿ ಸ್ವಲ್ಪ ಎಡರುತೊಡರುಗಳು ಇರುತ್ತವೆ. ಆದ್ದರಿಂದ ಸ್ವಲ್ಪ ತೊಂದರೆಯಾಯಿತು.

ಶ್ರೀ ಬಿ. ಶಿವರಾಮು : ಈ ವರ್ಷಕ್ಕೆ ಸುಮಾರು 400 ಲಕ್ಷಗಳನ್ನು ಒದಗಿಸಿದ್ದೇವೆಂದು ಹೇಳಿದ್ದೀರಿ. ಹಾಗಾದರೆ ಈ 400 ಲಕ್ಷ ರೂಪಾಯಿಗಳು, 117 ಲಕ್ಷಗಳನ್ನು ಹೊರತುಪಡಿಸಿ ಮಾಡಿರತಕ್ಕಂಥ ಕ್ರಿಯಾಶೀಲ ಯೋಜನೆಯೋ? ಅಥವಾ ಅದನ್ನೂ ಸೇರಿ ಮಾಡಿರತಕ್ಕಂಥಾದ್ದೇ?

ಶ್ರೀ ಸಿ. ಬೈರೇಗೌಡ :- ಅವರಿಗೆ ಗೊತ್ತಿರುವ ಹಾಗೆ, ಆ ಯೋಜನೆಗಳ ರೂಪುರೇಶೆಗಳನ್ನು ನಾವು ಕೊಟ್ಟಿದ್ದೇವೆ. ಆ ಅವಧಿಯಲ್ಲಿ ಅದು ಹೋದ ವರ್ಷದ್ದು ಇರಬಹುದು, ಈ ವರ್ಷದ್ದು ಇರಬಹುದು, ಅದು ಹೊರಗಡೆಯಿಂದ ಬರತಕ್ಕಂಥ ಹಣ ಮತ್ತು ಅಲ್ಲಿ ನಮ್ಮ ರಾಜ್ಯದ ಪಾಲು ಕೂಡ ಇದೆ. ಈ ಯೋಜನಾ ಅವಧಿಯಲ್ಲಿ ಈ ಹಣವನ್ನು ಪೂರ್ತಿಯಾಗಿ ಖರ್ಚು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ನಾನು ಕೇಳತಕ್ಕಂಥಾದ್ದು, ಪ್ರತಿವರ್ಷವೂ 400 ಲಕ್ಷಗಳನ್ನು ಕೊಡತಕ್ಕಂಥಾದ್ದು ಈ ಜರ್ಮನ್ ಅಭಿವೃದ್ಧಿ ಬ್ಯಾಂಕ್‌ನವರದ್ದು ಇದೆ. ಏಕೆಂದರೆ ನನ್ನ ಕ್ಷೇತ್ರದಲ್ಲಿಯೂ ಇದೆ. ಅದಕ್ಕಾಗಿ ಪ್ರಾಮುಖ್ಯವಾಗಿ ನಾನು ಪ್ರಶ್ನೆ ಕೇಳುತ್ತಾ ಇದ್ದೇನೆ. ಇದರಲ್ಲಿ ಮೊದಲನೇ ತಪ್ಪು ಅಂದರೆ ಹೋದ ವರ್ಷದಲ್ಲಿ ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡದೇ ಇರತಕ್ಕಂಥಾದ್ದು. ಈ ಸಾರಿಯೂ ಕೂಡ ಇವರು ಹಣ ಬಿಡುಗಡೆ ಮಾಡಿರತಕ್ಕಂಥಾದ್ದು 8-7-97ರಲ್ಲಿ. ಹೀಗೆ 8-7-97ರಲ್ಲಿ ಬಿಡುಗಡೆ ಮಾಡಿರುವುದರಿಂದ ಏನಾಗುತ್ತದೆ ಅಂದರೆ ಈ ಕೃಷಿ ಕೆಲಸಕಾರ್ಯಗಳು ಸೀಸನಲ್ ಆಪರೇಶನ್ಸ್ ಆಗಿರುತ್ತವೆ. ಹೀಗಾಗಿ ಈ ವರ್ಷವೂ ಕೂಡ ಹಣ ಉಳಿಯುತ್ತದೆ. ಸಕಾಲದಲ್ಲಿ ಹಣವನ್ನು ಬಿಡುಗಡೆ ಮಾಡದೇ ಇರತಕ್ಕಂಥಾದ್ದು ನಿಮ್ಮ ಇಲಾಖೆಯಲ್ಲಿ ಇರತಕ್ಕಂಥ ಕೊರತೆ. ಅದಕ್ಕೆ ಕಾರಣ ಏನೆಂದು ನನಗೆ ಗೊತ್ತಿಲ್ಲ. ಆ ಒಂದು ವ್ಯವಸ್ಥೆಯು ಸರಿಯಾಗಿ ಆಗಬೇಕು. ಎರಡನೇಯದಾಗಿ ಈ ವರ್ಷಕ್ಕೆ 400 ಲಕ್ಷಗಳ ಕ್ರಿಯಾಶೀಲ ಯೋಜನೆಯನ್ನು ಸೇರಿಸಿದ್ದಾರಲ್ಲ?

ಹೋದವರ್ಷದ 117 ಲಕ್ಷ ರೂಪಾಯಿಗಳ ಕೆಲಸ ಅಲ್ಲದೆ, ನಮ್ಮಲ್ಲಿ ಕೆಡಿಪಿ ಮೀಟಿಂಗ್‌ನಲ್ಲಿ ಚರ್ಚೆ ಮಾಡಿದಾಗ ಅವರು ಅದು ಲ್ಯಾಪ್ಸ್ ಆಗುತ್ತದೆ, ಈ ಸಾರಿ ಈ ಹಣಕ್ಕೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಇದನ್ನು ಸ್ಪಷ್ಟಪಡಿಸ ಬೇಕೆಂದು ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈ ಯೋಜನಾ ಅವಧಿಯಲ್ಲಿ ನಾವು ಎಷ್ಟು ಹಣವನ್ನು ಖರ್ಚು ಮಾಡಬೇಕೆಂದು ಮಾಡಿದ್ದೇವೋ ಅದನ್ನು ನಾವು ಮಾಡುತ್ತೇವೆ. ನನಗೆ ಗೊತ್ತಿರುವ ಹಾಗೆ ಆ ಹಣವು ಲ್ಯಾಪ್ಸ್ ಆಗತಕ್ಕಂಥ ಸಂದರ್ಭ ಇಲ್ಲ.

ಅಧ್ಯಕ್ಷರು : ಅಂದರೆ, ಪ್ರಾರಂಭಿಕ ವರ್ಷದಲ್ಲಿ ಮಾತ್ರ ತೊಂದರೆಯಾಗಿದೆ. ಮಾನ್ಯ ಕೆ.ಎಸ್.ಈಶ್ವರಪ್ಪನವರು ತಮ್ಮ ಪ್ರಶ್ನೆಯನ್ನು ವಸತಿ ಸಚಿವರಿಗೆ ಕೇಳಿದ್ದೀರಿ. ಅದು ನಗರಾಭಿವೃದ್ಧಿ ಸಚಿವರ ವ್ಯಾಪ್ತಿಗೆ ಬರುವುದರಿಂದ ಅವರ ಇಲಾಖೆಯ ಪ್ರಶ್ನೆಗಳು ಇರುವ ದಿನ ಲಿಸ್ಟ್ ಪ್ರಕಾರ ತೆಗೆದುಕೊಳ್ಳೋಣ.

ರೈತರಿಗೆ ಟ್ರ್ಯಾಕ್ಟರ್ ಮತ್ತು ಟಿಲ್ಲರ್‌ಗಳ ವಿತರಣೆ.

298 - ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶನ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮುಖಾಂತರ ರೈತರಿಗೆ ಈಗ ನೀಡಲಾಗುತ್ತಿರುವ ಟ್ರಾಕ್ಟರ್ ಮತ್ತು ಟಿಲ್ಲರ್‌ಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು)

ಆ) ಕೋಲಾರ ಜಿಲ್ಲೆಯ ಯಾವ ಯಾವ ತಾಲ್ಲೂಕುಗಳಿಗೆ ಎಷ್ಟೆಷ್ಟು ವಿತರಣೆ ಮಾಡಲಾಗುತ್ತಿದೆ.

ಇ) ಹೆಚ್ಚಾಗಿ ವಿತರಿಸಲು ಸರ್ಕಾರ ಬಯಸಿದೆಯೇ, ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಕರ್ನಾಟಕ ಕೃಷಿ ಕೈಗಾರಿಕಾ ನಿಗಮದ ಮೂಲಕ 1996-97ನೇ ಸಾಲಿನಲ್ಲಿ ವಿತರಿಸಲಾದ ಟ್ರ್ಯಾಕ್ಟರ್ ಹಾಗೂ ಪವರ್ ಟಿಲ್ಲರ್‌ಗಳ ಸಂಖ್ಯೆ ಹಾಗೂ 1997-98ನೇ ಸಾಲಿನಲ್ಲಿ ಇವುಗಳ ವಿತರಣೆಗೆ ಹಾಕಿ ಕೊಳ್ಳಲಾಗಿರುವ ಗುರಿಯು ಈ ರೀತಿ ಇದೆ :-

	1998-97ರಲ್ಲಿ ವಿತರಿಸಲಾದ ಸಂಖ್ಯೆ	*1997-98ನೇ ಸಾಲಿನ ಗುರಿ*
ಅ) ಟ್ರ್ಯಾಕ್ಟರ್	690	416
ಆ) ಪವರ್ ಟಿಲ್ಲರ್	240	266

ಇವುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.